FEBRUARY 14, 2026

AKASHAVANI - DHARWAD

PRADESH SAMACHARA (KANNADA) 12.00 P.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಸ್ವಚ್ಛ ಭಾರತ ಅಭಿಯಾನದ, ಎರಡನೇ ಆವೃತ್ತಿಯ ಅಂಗವಾಗಿ, ಬಳ್ಳಾರಿ ಮಹಾನಗರ ಪಾಲಿಕೆ, ಇಂದು ಬೆಳಗ್ಗೆ 6 ಕಿಲೋ ಮೀಟರ್ ಉದ್ದದ, ಜನ ಜಾಗೃತಿ ಓಟ ಆಯೋಜಿಸಿತ್ತು. ಮುನ್ಸಿಪಲ್ ಹೈಸ್ಕೂಲ್ ಮೈದಾನದಲ್ಲಿ, ಸ್ವಚ್ಛತಾ ಓಟಕ್ಕೆ, ಜಿಲ್ಲಾಧಿಕಾರಿ ಕೆ.ನಾಗೇಂದ್ರ ಪ್ರಸಾದ, ಮೇಯರ್ ಪಿ.ಗಾದೆಪ್ಪ, ಪಾಲಿಕೆ ಆಯುಕ್ತ ಪಿ.ಎಸ್.ಮಂಜುನಾಥ ಹಾಗೂ ಪಾಲಿಕೆ ಸದಸ್ಯರು, ಸ್ವಚ್ಛ ಬಳ್ಳಾರಿ ಆಂದೋಲನಕ್ಕೆ ಸಹಿ ಮಾಡಿ, ಓಟಕ್ಕೆ ಹಸಿರು ಧ್ವಜ ತೋರಿದರು.

<><><>

ಜಿಲ್ಲಾಧಿಕಾರಿ ಕೆ.ನಾಗೇಂದ್ರ ಪ್ರಸಾದ ಮಾತನಾಡಿ, ಸ್ವಚ್ಛ ಭಾರತ ಮಿ ೯ನ್ ಯೋಜನೆಯಡಿ, ಬಯಲು ಶೌಚ ಮುಕ್ತ, ವೈಜ್ಞಾನಿಕ ಘನತ್ಯಾಜ್ಯ ವಿಲೇವಾರಿ ಮತ್ತು ಸಂಸ್ಕರಣೆಗೆ, ಜಿಲ್ಲೆಯಲ್ಲಿ ಆದ್ಯತೆ ನೀಡಲಾಗಿದೆ, ಎಂದರು.

<><><>

ಜಿಲ್ಲಾಧಿಕಾರಿ ಕೆ. ನಾಗೇಂದ್ರ ಪ್ರಸಾದ ಧ್ವನಿ 30 ಸೆಕೆಂದುಗಳು

<><><>

ಬಳ್ಳಾರಿ ತಾಲೂಕು, ಕುಡುತಿನಿಯ ಆನಂದ, ಸ್ವಚ್ಛ ಭಾರತ ಅಭಿಯಾನದ, ಎರಡನೇ ಆವೃತ್ತಿಯ, ಜನ ಜಾಗೃತಿ ಓಟದಲ್ಲಿ ಪ್ರಥಮ ಸ್ಥಾನ ಪಡೆದರು. ಇನ್ನೋರ್ವ ಪದಕ ಪುರಸ್ಕೃತ, ವೀರೇಶ, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ಓಟಗಾರ ವೀರೇಶ ಧ್ವನಿ 18 ಸೆಕೆಂದುಗಳು

<><><>

ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ, ಸಾವಿರ ದಿನಗಳ ಆಡಳಿತವನ್ನು ಪೂರ್ಣಗೊಳಿಸಿದ ಹಿನ್ನೆಲೆ, ಹಾವೇರಿಯ ಅಜ್ಜಯ್ಯನ ಗುಡಿ ಆವರಣದ ಮೈದಾನದಲ್ಲಿ, ಈ ಬೆಳಗ್ಗೆ ಸಾಧನಾ ಸಮಾವೇಶ, ಆಯೋಜಿಸಿದೆ. ರಾಜ್ಯದ 1 ಲಕ್ಷ ಜನರಿಗೆ, ಭೂ ಗ್ಯಾರಂಟಿ ಯೋಜನೆಯ, ಹಕ್ಕು ಪತ್ರ ವಿತರಿಸಲು, ಕಂದಾಯ ಇಲಾಖೆ ಸಿದ್ಧತೆ ಕೈಗೊಂಡಿದೆ. 2 ಲಕ್ಷ 76 ಸಾವಿರ ಚದರ ಅಡಿ ವಿಸ್ತೀರ್ಣದ, ವೇದಿಕೆ ನಿರ್ಮಿಸಲಾಗಿದೆ. 70 ಸಾವಿರ ಜನರಿಗೆ ಆಸನ ವ್ಯವಸ್ಥೆ ಹಾಗೂ ಒಂದೂವರೆ ಲಕ್ಷ ಜನರಿಗೆ, ಊಟದ ವ್ಯವಸ್ಥೆ ಮಾಡಲಾಗಿದೆ. ಸಮಾವೇಶದ ಭದ್ರತೆಗಾಗಿ, ಹಾವೇರಿ, ಶಿವಮೊಗ್ಗ, ಚಿತ್ರದುರ್ಗ, ಮಂಗಳೂರು, ಬೆಂಗಳೂರು ಹಾಗೂ ಬೆಳಗಾವಿ ಜಿಲ್ಲೆ ಪೊಲೀಸರನ್ನು ನಿಯೋಜಿಸಲಾಗಿದೆ. ಇನ್ನು ಕೆಲವೇ ಕ್ಷಣಗಳಲ್ಲಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಸಮಾವೇಶವನ್ನು ಉದ್ದೇಶಿಸಿ, ಮಾತನಾಡಲಿದ್ದಾರೆ.

<><><>

ಕರ್ನಾಟಕ ರಾಜ್ಯ, ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ ನಿಯಮಿತ (ಕೆಪೆಕ್) ಸಂಸ್ಥೆ, ಕೃಷಿ ಹಾಗೂ ತೋಟಗಾರಿಕೆ ಇಲಾಖೆ ಸಹಯೋಗದಲ್ಲಿ, ಚಿಕ್ಕಮಗಳೂರು ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ, 17ನೇ ತಾರೀಖು, ಬೆಳಗ್ಗೆ 10 ಗಂಟೆಗೆ, 'ಕಾಳು ಮೆಣಸು, ಸಂಬಾರು ಉತ್ಪನ್ನಗಳ ಸಂಸ್ಕರಣೆ, ಮೌಲ್ಯವರ್ಧನೆ ಹಾಗೂ ರಫ್ತು' ಕುರಿತ, ತರಬೇತಿ ಕಾರ್ಯಾಗಾರ ಆಯೋಜಿಸಿದೆ. ಸಂಬಾರು ಬೆಳೆಗಾರರು, ಸಂಬಾರು ಪದಾರ್ಥಗಳ ಉದ್ದಿಮೆದಾರರು ಪಾಲ್ಗೊಳ್ಳುವಂತೆ ಕೆಪೆಕ್ ವ್ಯವಸ್ಥಾಪಕ ನಿರ್ದೇಶಕರು, ಕೋರಿದ್ದಾರೆ.

<><><>

ಧಾರವಾಡ ಜಿಲ್ಲೆ, ಹುಬ್ಬಳ್ಳಿ ತಾಲೂಕು, ಅಮರಗೋಳದ, ಕೃಷಿ ಉತ್ಪನ್ನ ಹುಟ್ಟುವಳಿ ಮಾರಾಟ ಕೇಂದ್ರ – ಎ.ಪಿ.ಎಂ.ಸಿ.ಯಲ್ಲಿ, ಕಳೆದ ಒಂದು ತಿಂಗಳಿನಿಂದ, ಒಣ ಮೆಣಸಿನಕಾಯಿ ಮಾರಾಟ, ಭರದಿಂದ ಸಾಗಿದೆ. ಕಳೆದ 7ನೇ ತಾರೀಖಿನ ಟೆಂಡರ್ ಪ್ರಕ್ರಿಯೆಯಲ್ಲಿ, ಒಂದೇ ದಿನ 29 ಕೋಟಿ 39 ಲಕ್ಷ ರೂಪಾಯಿಗೂ ಹೆಚ್ಚು, ಒಣ ಮೆಣಸಿನಕಾಯಿ ಮಾರಾಟ ನಡೆದಿದೆ. ರಾಯಚೂರು, ಲಿಂಗಸೂರು, ಬಳ್ಳಾರಿ, ಗುಂಟೂರು, ವಿಜಯಪುರ, ಬಾಗಲಕೋಟೆ, ಗದಗ, ಹಾವೇರಿ, ಲಕ್ಷ್ಮೇಶ್ವರ ಹಾಗೂ ಬ್ಯಾಡಗಿ ಮತ್ತು ಕುಂದಗೋಳ, ತಾಲೂಕಿನ ರೈತರು, ತಮ್ಮ ಒಣ ಮೆಣಸಿನಕಾಯಿ ಬೆಳೆಯನ್ನು, ಹೆಚ್ಚಿನ ಪ್ರಮಾಣದಲ್ಲಿ ಮಾರಾಟಕ್ಕೆ ತಂದಿದ್ದಾರೆ. ಕುಸುಗಲ್ಲ ಗ್ರಾಮದ ರೈತ ಬಸವರಾಜ ಭೋಸಗಿ, ಈ ಬಾರಿ ಬೆಳೆದ, ಒಣ ಮೆಣಸಿನಕಾಯಿಗೆ, ಕ್ವಿಂಟಾಲ್‌ಗೆ 46 ಸಾವಿರ ರೂಪಾಯಿ ಬೆಲೆ ಬಂದಿದ್ದು, ಶೇಕಡ 50 ರಷ್ಟು ಲಾಭ ಗಳಿಸಿದ್ದಾಗಿ, ತಿಳಿಸಿದರು.

<><><>

ಉತ್ತರಕನ್ನಡ ಜಿಲ್ಲೆಯಾದ್ಯಂತ, ಇಂದು ಮತ್ತು ನಾಳೆ, ತೀವ್ರ ಬಿಸಿ ಗಾಳಿ ಬೀಸುವ ವಾತಾವರಣವಿರಲಿದೆ ಎಂದು, ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಸಾರ್ವಜನಿಕರು ಮುನ್ನೆಚ್ಚರಿಕೆವಹಿಸುವಂತೆ, ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯಾ ತಿಳಿಸಿದ್ದಾರೆ. ಜಿಲ್ಲಾ ವಿಪತ್ತು ನಿರ್ವಹಣಾ ಘಟಕ, ಸಾರ್ವಜನಿಕರ ಆರೋಗ್ಯದ ಹಿತದೃಷ್ಟಿಯಿಂದ, ಮುನ್ನೆಚ್ಚರಿಕೆ ಕ್ರಮಗಳನ್ನು ಜಾರಿಗೊಳಿಸಿದೆ. ಸಾಕ ್ಟ ನೀರು ಕುಡಿಯುವಂತೆ, ಓ.ಆರ್.ಎಸ್ ಪಾನಕ, ನಿಂಬೆ ನೀರು, ಮಜ್ಜಿಗೆ ಎಳೆ ನೀರು ಮುಂತಾದ ದ್ರವ ಪದಾರ್ಥಗಳನ್ನು ಹೆಚ್ಚು ಸೇವಿಸುವಂತೆ, ತಿಳಿಸಿದೆ. ಹಗುರ, ತೆಳುವಾದ ಮತ್ತು ಸಡಿಲವಾದ ಹತ್ತಿ ಬಟ್ಟೆಗಳನ್ನು ಧರಿಸುವಂತೆ, ತಲೆ ಮತ್ತು ಮುಖವನ್ನು ಮುಚ್ಚಿಕೊಳ್ಳುವಂತೆ, ಮಧ್ಯಾಹ್ನ 12 ರಿಂದ 4 ಗಂಟೆಯ ವರೆಗೆ, ಹೊರಗಡೆ ಹೋಗುವುದನ್ನು ವರ್ಜಿಸುವಂತೆ, ಮನವಿ ಮಾಡಿದೆ. ಹೊರಗೆ ಕೆಲಸ ಮಾಡುವವರು, ಆಗಾಗ ನೆರಳಿನಲ್ಲಿ ವಿಶ್ರಾಂತಿ ತೆಗೆದುಕೊಳ್ಳುವಂತೆ, ಮಕ್ಕಳು, ವೃದ್ಧರು, ಗರ್ಭಿಣಿಯರು ಮತ್ತು ಅಸ್ವಸ್ಥರಿಗೆ ವಿಶೇ ’ ಕಾಳಜಿ ವಹಿಸುವಂತೆ ಕೋರಲಾಗಿದೆ. ತಲೆಸುತ್ತು, ದೈಹಿಕ ದೌರ್ಬಲ್ಯ, ವಾಂತಿ, ಜ್ವರದ ಲಕ್ಷಣಗಳು ಕಂಡುಬಂದಲ್ಲಿ, ತಕ್ಷಣ ವೈದ್ಯರನ್ನು ಸಂಪರ್ಕಿಸುವಂತೆ ಜಿಲ್ಲಾಡಳಿತ, ಪ್ರಕಟಿಸಿದೆ.

<><><>

ಉತ್ತರಕನ್ನಡ ಜಿಲ್ಲೆಯ, ರಂಗಕರ್ಮಿ ರೇಣುಕಾ ಸಿದ್ದಿ ಹಾಗೂ ಧಾರವಾಡದ ಅಂಬಿಕಾ ಮಾಲಿ ಸೇರಿದಂತೆ, ಹದಿನೈದು ಜನ, ಕಲಾವಿದರು ನಾಟಕ ರಚನೆ ಕಮ್ಮಟಕ್ಕೆ ಆಯ್ಕೆಯಾಗಿದ್ದಾರೆ. ಶಿವಮೊಗ್ಗ ರಂಗಾಯಣದ ಆಡಳಿತಾಧಿಕಾರಿ ಎ.ಸಿ. ಶೈಲಜಾ ಮಾಹಿತಿ ನೀಡಿ, ಕೇಂದ್ರ ಸಾಹಿತ್ಯ ಅಕಾದೆಮಿ ಪ್ರಶಸ್ತಿ ಪುರಸ್ಕೃತ, ಬೊಳುವಾರು ಮೊಹಮ್ಮದ್ ಕುಂಞ ಅವರ, ಸ್ವಾತಂತ್ರ್ಯ ಓಟ ಕಾದಂಬರಿಯನ್ನು, ನಾಟಕವಾಗಿ ರೂಪಾಂತರಿಸಿ, ರಾಜ್ಯಾದ್ಯಂತ ಪ್ರದರ್ಶಿಸುವ ಯೋಜನೆಯಡಿ, ಕಲಾವಿದರ ತಾತ್ಕಾಲಿಕ ಆಯ್ಕೆ ಪಟ್ಟಿ ಬಿಡುಗಡೆ ಮಾಡಲಾಗಿದೆ ಎಂದರು.

<><><>

ಯಕ್ಷಗಾನ ಕಲೆ, ಪ್ರಪಂಚದ ಶ್ರೀಮಂತ ಕಲೆಯಾಗಿ ಗುರುತಿಸಿಕೊಂಡಿದೆ ಎಂದು, ಖ್ಯಾತ ಯಕ್ಷಗಾನ ಭಾಗವತ, ಪಟ್ಲ ಸತೀಶ ಶೆಟ್ಟಿ ಹೇಳಿದ್ದಾರೆ. ತುಮಕೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕ, ನಿತ್ಯಾನಂದ ಶೆಟ್ಟಿ ಅವರ, 'ಅಳವು ಅರಿಯದ ಭಾ ” ಕೃತಿಯನ್ನು,

ಮಂಗಳೂರಿನಲ್ಲಿ, ಬಿಡುಗಡೆ ಮಾಡಿ, ಮಾತನಾಡಿದರು. ನೃತ್ಯ, ಅಭಿನಯ, ಸಂಗೀತದ ಜೊತೆಗೆ, ಶುದ್ಧ ಕನ್ನಡವನ್ನು ಯಕ್ಷಗಾನ ಇಂದಿಗೂ ಉಳಿಸಿ, ಬೆಳೆಸುತ್ತಿದೆ. ಕ್ರಿಶ್ಚಿಯನ್ ಬಾಬು ಹಾಗೂ ಜಬ್ಬಾರ್ ಸಮೊ, ಯಕ್ಷಗಾನವನ್ನು ಜಾತಿ–ಧರ್ಮಗಳ ಎಲ್ಲೆ ಮೀರಿ, ವಿಸ್ತರಿಸಿದ್ದಾರೆ ಎಂದರು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.